ವಾಗಿ ನಮ್ಮ ಇಲಾಖೆಗೆ ನೇಮಕ ಮಾಡಿಕೊಂಡಂತಹವರು ಆ ರೀತಿ ಮಾಡುವುದಿಲ್ಲ ಅಂತ ಏನೂ ಇಲ್ಲ. ಕೆಲವು ಜನ ದುರುಪಯೋಗ ಮಾಡುತ್ತಾರೆ. ಅಂತಹವರ ಮೇಲೆ ಕ್ರಮ ಕೈಗೊಳ್ಳುತ್ತೇವೆ, ನಮ್ಮದೇ ಸ್ವತಂತ್ರ ಇಲಾಖೆ ಬೇಕು, ಎಸ್ಸಾರಣಾಧಿಕಾರಿಗಳಿಗೆ ತರಬೇತಿ ಕೊಡಬೇಕು. ಗ್ರಾಮಾಭಿವೃದ್ಧಿಯ ಬಗ್ಗೆ ಹೆಚ್ಚಿನ ತರಬೇತಿ ಕೊಡಬೇಕೆಂಬುದಕ್ಕೆ ಸರ್ಕಾರ ತಾತ್ವಿಕವಾಗಿ ಒಪ್ಪಿಕೊಂಡಿದೆ. ಆ ದಿಕ್ಕಿನಲ್ಲಿ ಆಗಾಗಲೇ ಕ್ರಮವನ್ನು ಕೈಗೊಳ್ಳಲು ಪ್ರಯತ್ನ ಮಾಡುತ್ತಿದ್ದೇವೆ.

ಚೌಲ್ಟ್ರಿ ಡೆವಲಪ್‌ಮೆಂಟ್ ಕಾರ್ಪೊರೇಷನ್

೧೩೫. ಶ್ರೀ ಹೆಚ್.ಜಿ. ಚಿನ್ನಪ್ಪ (ಮಾಗಡಿ) ಪಾನ್ಯ ಪಶುಸಂಗೋಪನಾ ಪಶು ವೈದ್ಯಕೀಯ ಹಾಗೂ ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕದಲ್ಲಿ ಹಿಂದೆ ಸರಕಾರ ಕೋಳಿ ಸಾಕಾಣಿಕೆ ಅಭಿವೃದ್ಧಿ ಸಂಸ್ಥೆಯೊಂದನ್ನು ರಚಿಸಬೇಕೆಂದೂ ಹಾಗೂ ಅದರ ಬಗ್ಗೆ ಒಂದು ವರದಿ ಕೂಡ ತಯಾರಿಸಿ ಅದನ್ನು ಹಣಕಾಸಿನ ಒಪ್ಪಿಗೆಗಾಗಿ ಕಳುಹಿಸಿಕೊಟ್ಟಿದ್ದು ನಿಜವೆ?

ಆ) ಹಾಗಿದ್ದಲ್ಲಿ ಅದು ಈಗ ಯಾವ ಹಂತದಲ್ಲಿದೆ ಹಾಗೂ ಈಗ ಸದರಿ ಸಂಸ್ಥೆಯನ್ನು ಅಸ್ತಿತ್ವಕ್ಕೆ ತರಲಾಗುವುದೇ?

ಇ) ಈ ಹಿಂದೆ ಸರಕಾರದವರು ಕೋಳಿ ಮೊಟ್ಟೆ ಮಾಂಸಗಳನ್ನು ಉಚಿತವಾಗಿ ಸರಬರಾಜು ಮಾಡುತ್ತಿದ್ದು ಈಗ ಅದನ್ನು ರದ್ದುಗೊಳಿಸಿರುವುದು ನಿಜವೆ, ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು?

ಈ) ಆಂಧ್ರದಲ್ಲಿ ಕೋಳಿ ಸಾಕಾಣಿಕೆ ಉದ್ದಿಮೆದಾರರಿಗೆ ಅನುಕೂಲವಾಗುವಂತೆ ಫೀಡ್ ಆರ್ಡರ್ ಹಾರಿಗೆ ತಂದು ಅದಕ್ಕೆ ಬೇಕಾದ ಆಹಾರ ಪದಾರ್ಥಗಳನ್ನು ನಿಯಂತ್ರಿತ ದರದಲ್ಲಿ ಒದಗಿಸುತ್ತಿದ್ದಾರೆ. ಅದರಂತೆ ನಮ್ಮ ಆ ಕಾರ್ಯಕ್ರಮ ಕೈಗೊಂಡು ಕೋಳಿಸಾಕಾಣಿಕೆ ಉದ್ದಿಮೆದಾರರಿಗೆ ಸಹಾಯ ಮಾಡಲು ಸಾಧ್ಯವಾಗುವುದಿಲ್ಲವೆ?

ಶ್ರೀ ವಿಶ್ವನಾಥರೆಡ್ಡಿ (ಪಶುಸಂಗೋಪನಾ ಪಶು ವೈದ್ಯಕೀಯ ಹಾಗೂ ತೋಟಗಾರಿಕೆ ಮಂತ್ರಿಗಳು).—

ಅ) ನಿಜ

ಆ) ಈ ಪ್ರಸ್ತಾಪನೆಯನ್ನು ಸೂಕ್ತ ಬದಲಾವಣೆಗಳೊಡನೆ ಅಸ್ತಿತ್ವಕ್ಕೆ ತರುವ ಕಾರ್ಯಕ್ರಮ ಸರಕಾರದ ಪರಿಶೀಲನೆಯಲ್ಲಿದೆ.

ಇ) ರದ್ದುಗೊಳಿಸಿಲ್ಲಾ ಈಗಲೂ ಸಹ ಸೌಲಭ್ಯಗಳನ್ನು ಮುಂದುವರಿಸಲಾಗುತ್ತಿದೆ.

ಈ) ಈ ಪ್ರಸ್ತಾಪನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಹೆಚ್. ಜಿ. ಚಿನ್ನಪ್ಪ.—ಕಳೆದ ಸಾರಿಯೂ ಇದು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಉತ್ತರಿಸಿದ್ದಿರಿ. ಸರ್ಕಾರದ ಪರಿಶೀಲನೆಯಲ್ಲಿ ಎಷ್ಟು ವರ್ಷಗಳಿಂದ ಇದೆ? ಎಷ್ಟು ದಿನಗಳಲ್ಲಿ ಅದನ್ನು ಕಾರ್ಯಗತಗೊಳಿಸುತ್ತೀರಿ?

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಇದರ ಬಗ್ಗೆ ತೀವ್ರ ಕ್ರಮ ಕೈಗೊಳ್ಳಲು ಪ್ರಯತ್ನ ಮಾಡುತ್ತೇನೆ.

ಶ್ರೀ ಎನ್. ಚಿಕ್ಕೇಗೌಡ.—ಬಹುಶಃ ಸರ್ಕಾರಕ್ಕೆ ಗೊತ್ತಿರಬೇಕಂ,—ಕೋಳಿ ಮೊಟ್ಟೆ ಸಹ ಸಸ್ಯಾಹಾರಿ ಎಂದಂ. ಆದ್ದರಿಂದ ಕೋಳಿ ಸಾಕಣೆ ನಿಗಮ ಮಾಡಿ ಕೋಳಿ ಸಾಕಣೆಗೆ ಬೇಕಾದ ಸವಲತ್ತುಗಳನ್ನು ಮತ್ತು ಆಹಾರವನ್ನು ಕೊಟ್ಟು ಮೊಟ್ಟೆ ಉತ್ಪಾದನೆ ಮಾಡತಕ್ಕ ವ್ಯವಸ್ಥೆ ಮಾಡುತ್ತೀರಾ?

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಸರ್ಕಾರದಲ್ಲಿ ಈ ಬಗ್ಗೆ ಪ್ರಸ್ತಾಪ ಇದೆ ಎಂದು ಹೇಳಿದ್ದೇನೆ.

ಶ್ರೀ ಹೆಚ್. ಜಿ. ಚಿನ್ನಪ್ಪ.—ಇದರ ಬಗ್ಗೆ ಕಳೆದ ವರ್ಷ ಏನು ಉತ್ತರವನ್ನು ಕೇಳಿದ್ದೆವೋ ಅದೇ ಉತ್ತರವನ್ನು ಇವತ್ತೂ ಕೊಡುತ್ತಿದ್ದಾರೆ. ಆದ್ದರಿಂದ ನಿರ್ದಿಷ್ಟವಾಗಿ ಎಷ್ಟು ದಿನಗಳಲ್ಲಿ ಆಹಾರ ನಿಯಂತ್ರಣದ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಈಗಾಗಲೇ ಇದರ ಬಗ್ಗೆ ಬೇರೆ ಪ್ರದೇಶಗಳಲ್ಲಿ ಏನೇನೆ ಬೆಳಗಳಿವೆ ಅವನ್ನೆಲ್ಲ ತರಿಸಲಾಗಿದೆ. ಆಗತ್ಯ ಪದಾರ್ಥಗಳ ನಿಯಮ ೧೯೫೦ರ ಪ್ರಕಾರ ನಮ್ಮ ರಾಜ್ಯದಲ್ಲೂ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಸಿ. ಬೈರೇಗೌಡ —ಕೋಳಿಗೆ ಬೇಕಾದ ಮೇವು, ಔಷಧಿಗಳಿಗೆಲ್ಲ ಬೆಲೆ ಹೆಚ್ಚಾಗಿರುವುದರಿಂದ ಅದಕ್ಕೆ ಅನುಗುಣವಾಗಿ ಕೋಳಿ ಮೊಟ್ಟೆ ಬೆಲೆ ಹೆಚ್ಚಾಗದೆ ಇರುವ ಕಾರಣ ಕೋಳಿ ಸಾಕಣೆ ಮಾಡುತ್ತಿರುವವರು ಆ ಕಸಬನ್ನು ಬಿಡುವ ಪರಿಸ್ಥಿತಿ ಬಂದಿದೆ. ಆದ್ದರಿಂದ ಖರ್ಚಿಗೆ ಅನುಗುಣವಾಗಿ ಬೆಲೆ ಸಿಗುವಂತೆ ವ್ಯವಸ್ಥೆ ಮಾಡುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳುತ್ತದೆಯೆ?

ಶ್ರೀ ವಿಶ್ವನಾಥ ರೆಡ್ಡಿ ಮುದ್ನಾಳ್.—ಆ ವಿಷಯ ಬೇರೆ ಆಯಿತು. ಅದಕ್ಕೆ ಪ್ರತ್ಯೇಕ ಪ್ರಶ್ನೆ ಹಾಕಬೇಕು.

ನ್ಯಾಯ ಬೆಲೆಯಲ್ಲಿ ರೈತರಿಗೆ ಬೀಜಗಳನ್ನು ಒದಗಿಸುರುವ ಬಗ್ಗೆ.

೧೭೫. ಶ್ರೀ ಬಿ. ಆರ್. ಪಾಟೀಲ್ (ಅಳಂದ).—ಮಾನ್ಯ ಕೃಷಿ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರೈತರಿಗೆ ಬಿತ್ತುವ ಬೀಜಗಳು ಬೇರೆ ರಾಜ್ಯಗಳಿಗಿಂತ ಹೆಚ್ಚಿನ ಬೆಲೆಯಲ್ಲಿ ದೊರೆಯುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಸರ್ಕಾರ ರೈತರಿಗೆ ನ್ಯಾಯ ಬೆಲೆಯಲ್ಲಿ ಮತ್ತು ರಿಯಾಯಿತಿದರಗಳಲ್ಲಿ ಬಿತ್ತುವ ಬೀಜಗಳನ್ನು ಸರಬರಾಜು ಮಾಡುವ ಬಗ್ಗೆ ಕೈ ಕೊಂಡ ಕ್ರಮವೇನು?

ಶ್ರೀ ಬಿ. ಎಲ್. ಗೌಡ (ಕೃಷಿ ಮಂತ್ರಿಗಳು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ, ಒಳ್ಳೆಯ ಬೀಜಗಳನ್ನು ಕೃಷಿ ಕರ್ನಾಟಕ ರಾಜ್ಯ ಬೀಜ ನಿಗಮ ಹಾಗೂ ಕರ್ನಾಟಕ ರಾಜ್ಯ ಕೃಷಿ ಕೈಗಾರಿಕ ನಿಗಮ ಇವುಗಳ ಮೂಲಕ ಒದಗಿಸಲಾಗುತ್ತಿದೆ.

ಶ್ರೀ ಬಿ. ಆರ್. ಪಾಟೀಲ್.—ವಿಶೇಷವಾಗಿ ಮಹಾರಾಷ್ಟ್ರ ಬಾರ್ಡರ್‌ನಲ್ಲಿ ಬೇರೆ ರಾಜ್ಯಗಳಿಂದ ಬಂದಂಥ ಬೀಜಗಳನ್ನು ಮಾರಾಟ ಮಾಡುತ್ತಾರೆ. ಆದು ನಮ್ಮ ಬೀಜ ನಿಗಮಕ್ಕಿಂತ ಬಹಳ ಅಗ್ಗವಾಗಿ ಸಿಗುತ್ತದೆ; ಅದಕ್ಕೋಸ್ಕರ ನಮ್ಮ ಬೀಜ ಮಾರಾಟವಾಗುವುದಿಲ್ಲ. ಬೇರೆ ಖಾಸಗಿ ಏಜೆಂಟ್‌ಗಳು ಪೋಸ ಮಾಡಿ ಮಾರಾಟ ಮಾಡುತ್ತಿದ್ದಾರೆ. ಇದರಿಂದ ರೈತರಿಗೆ ಅನ್ಯಾಯವಾಗುತ್ತಿದೆ. ಇದರ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳಬೇಕು.

ಶ್ರೀ ಬಿ. ಎಲ್. ಗೌಡ.—ಮಾಲಿ ರಾಜ್ಯದಲ್ಲಿರುವಂಥ ಬೀಜ ನಿಗಮ ಮತ್ತು ಕೃಷಿ ಕೈಗಾರಿಕಾ ನಿಗಮಗಳಂತೆ ನಮ್ಮ ರಾಜ್ಯಕ್ಕೆ ಬೇಕಾಗಿರುವ ಬೀಜಗಳಲ್ಲಿ ಶೇಕಡ ೨೦ರಿಂದ ೩೦ರಷ್ಟು ಮಾತ್ರ ಸರಬರಾಜು ಮಾಡುವುದಕ್ಕೆ ಸಾಧ್ಯವಾಗಿದೆ. ಪೂರ್ತಿ ಸರಬರಾಜು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಬೇರೆ ರಾಜ್ಯಗಳಿಂದಲೂ ನಮ್ಮ ರಾಜ್ಯಕ್ಕೆ ಬೀಜ ಬರುವುದಕ್ಕೆ ಅವಕಾಶ ಮಾಡಿ ಕೊಟ್ಟಿಲ್ಲ. ಒಟ್ಟಿನಲ್ಲಿ ರೈತರ ಬೇಡಿಕೆಯನ್ನು ಪೂರೈಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಬಿ. ಆರ್. ಪಾಟೀಲ್.—ಈಗ ಮಾರಾಟವಾಗುತ್ತಿರುವ ಬೀಜದ ಬೆಲೆ ಸರ್ಕಾರದ ನ್ಯಾಯ ಬೆಲೆ ಆಗಿದೆಯೆ? ಹಾಗಿಲ್ಲದಿದ್ದರೆ ಅದನ್ನು ಕಡಿಮೆ ಮಾಡುವ ವಿಚಾರ ಸರ್ಕಾರದ ಗಮನದಲ್ಲಿದೆಯೆ?

ಶ್ರೀ ಬಿ. ಎಲ್. ಗೌಡ.—ಈಗ ಮಾರಾಟ ಮಾಡತಕ್ಕ ಬೀಜದ ಬೆಲೆ ರಾಜ್ಯದ ಕೆಲವು ಕಡೆಗಳಲ್ಲಿ ಕಡಿಮೆ ಇದೆ. ಅಂಧ್ರ ಪ್ರದೇಶಕ್ಕೂ ಕಡಿಮೆ ಇದೆ. ಕೆಲವು ಕಡೆ ಮಾತ್ರ ಜಾಸ್ತಿ ಇದೆ. ನಾವು ಮಾರಾಟ ಮಾಡುವ ಎಲ್ಲ ಕಡೆಗಳಲ್ಲಿ ಕಡಿಮೆ ಇದೆ.

ಶ್ರೀ ಬಿ. ಆರ್. ಯಾವಗಲ್.—೧೯೫೬-೫೭ರಲ್ಲಿ ಹತ್ತಿ ಬೀಜ ಕೊರತೆ ಬಂದು ರೈತರು ತೊಂದರೆಗೆ ಒಳಗಾದ್ದು ಸರ್ಕಾರದ ಗಮನಕ್ಕೆ ಬಂದಿದೆಯೆ? ಆ ಅವಧಿಯಲ್ಲಿ ಒಂದು ಕೆ.ಜಿ. ಹತ್ತಿ ಕಾಳಿಗೆ ೫೦ ರೂಪಾಯಿಗಳಿಗಿಂತ ಜಾಸ್ತಿ ಕೊಟ್ಟು ತೆಗೆದುಕೊಂಡು ಹಾಕಿ ಪೋಸ ಹೋಗಿ ಬೆಳೆ ಎಲ್ಲ ನಾಶವಾದ ಪರಿಸ್ಥಿತಿಯಾದರಿಂದ ಸರ್ಕಾರ ಯಾವ ರೀತಿ ಅವರಿಗೆ ಬೀಜ ಒದಗಿಸುವ ವ್ಯವಸ್ಥೆ ಮಾಡಿತ್ತು ಮತ್ತು ಈ ವರ್ಷ ಏನು ಕಾರ್ಯಕ್ರಮ ಹಾಕಿಕೊಂಡಿದೆ?